ಓ.ಎಸ್. ನಂಬರಃ 122/2021

ಪಿ. ಡಬ್ಲ್ಯೂಃ 2

**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು, ತಾಃ 09–10–2025)**

**ಪಾಟೀ ಸವಾಲುಃ 3(ಎ) ಮತ್ತು (ಬಿ) ಪ್ರತಿವಾದಿಗಳ ಪರ ಶ್ರೀ ಜೆ.ಡಿ.ಬಿ. ವಕೀಲರಿಂದ,**

ವಾದಿ ನಾಗಮ್ಮ ಕೋಂ ಲಚ್ಮಯ್ಯ ನಾಯ್ಕ ರವರು ನನ್ನ ಸ್ವಂತ ಅಕ್ಕ. ನನ್ನ ಅಕ್ಕನಿಗೆ ಸಹಾಯ ಮಾಡಲು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಹೌದು. ನಾನು 1979 ನೇ ಸಾಲಿನಲ್ಲಿ ಜನಿಸಿರುತ್ತೇನೆ. ನನ್ನ ಜನನಕ್ಕಿಂತ ಪೂರ್ವದಲ್ಲಿ ವಾದಿ ಮತ್ತು ಪ್ರತಿವಾದಿಗಳ ಕುಟುಂಬದಲ್ಲಿ ನಡೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನು ಬರೆಯಲಾಗಿದೆ ಎಂಬುದನ್ನು ತಿಳಿದುಕೊಂಡಿರುತ್ತೇನೆ. ಸದ್ರಿ ಪ್ರಮಾಣ ಪತ್ರವನ್ನು ತಯಾರಿಸುವಾಗ ನನ್ನ ಜನನಕ್ಕಿಂತ ಪೂರ್ವದ ಸಂಗತಿಗಳ ಬಗ್ಗೆ ಮಾಹಿತಿ ನೀಡಿರುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವಂತಹ ಗೋಯ್ದು @ ಗೋವಿಂದ ಲಚ್ಮಯ್ಯ ನಾಯ್ಕ ರವರು ನಾನು ಹುಟ್ಟುವುದಕ್ಕಿಂತ ಮೊದಲೇ ಮರಣ ಹೊಂದಿರುತ್ತಾರೆ. ನಾನು ಹುಟ್ಟುವುದಕ್ಕಿಂತ ಮೊದಲೇ ಮಾರಿ ಲಚ್ಮಯ್ಯ ನಾಯ್ಕ ರವರು ಮರಣ ಹೊಂದಿರುತ್ತಾರೆ. ಹಾದಿ ಕೋಂ ಮಾರಿ ನಾಯ್ಕ ರವರನ್ನು ನಾನು ನೋಡಿರುತ್ತೇನೆ. ದಾವಾ ಆಸ್ತಿಗಳನ್ನು ನಾನು ನೋಡಿದಾಗಿನಿಂದ ಹಾದಿ ಕೋಂ ಮಾರಿ ನಾಯ್ಕ ರವರು ಬೇಸಾಯ ಮಾಡುತ್ತಾ ಬಂದಿರುತ್ತಾರೆ. ಸದ್ರಿ ಹಾದಿ ಕೋಂ ಮಾರಿ ನಾಯ್ಕ ರವರು ಮರಣ ಹೊಂದಿದ ನಂತರ ಅವರ ಮೊಮ್ಮಕ್ಕಳಾದ ಪ್ರತಿವಾದಿ 3(ಎ) ರಿಂದ 3(ಸಿ) ರವರು ದಾವಾ ಆಸ್ತಿಯಲ್ಲಿ ಬೇಸಾಯ ಮಾಡುತ್ತಾ ಬಂದಿರುತ್ತಾರೆ.

2. ಲಚ್ಮಯ್ಯ ನಾಯ್ಕ ಮತ್ತು ಹಾದಿ ನಾಯ್ಕ ರವರು ಮೊದಲಿನಿಂದಲೂ ಪ್ರತ್ಯೇಕವಾಗಿ ವಾಸ ಮಾಡುತ್ತಾ ಬಂದಿದ್ದರು ಎಂದರೆ, ಸಾಕ್ಷಿಯು ಒಟ್ಟಾಗಿ ವಾಸ ಮಾಡುತ್ತಿದ್ದರು ಎಂದು ಉತ್ತರಿಸಿರುತ್ತಾರೆ. ಸುಮಾರು 30-40 ವರ್ಷಗಳ ಹಿಂದೆ ಲಚ್ಮಯ್ಯ ನಾಯ್ಕ ರವರ ಕುಟುಂಬ ಮತ್ತು ಹಾದಿ ನಾಯ್ಕ ರವರ ಕುಟುಂಬ ಪ್ರತ್-ಪ್ರತ್ಯೇಕವಾಗಿ ವಾಸ ಮಾಡಿಕೊಂಡು ಬಂದಿರುತ್ತಾರೆ. ಲಚ್ಮಯ್ಯ ನಾಯ್ಕರವರು ತನ್ನ ಜೀವಿತ ಕಾಲದಲ್ಲಿ ದಾವಾ ಆಸ್ತಿಯಲ್ಲಿ ಪಾಲು ಕೇಳಿರುತ್ತಾರೆ, ಆ ಕಾರಣಕ್ಕಾಗಿಯೇ ಅವರನ್ನು ಮನೆಯಿಂದ ಹೊರಹಾಕಿರುತ್ತಾರೆ. ಆ ರೀತಿ ದಾವಾ ಆಸ್ತಿಯಲ್ಲಿ ಪಾಲನ್ನು ಲಚ್ಮಯ್ಯ ನಾಯ್ಕರವರು ಸುಮಾರು 70 ವರ್ಷಗಳ ಹಿಂದೆ ಕೇಳಿರುತ್ತಾರೆ. ಈ ವಿಷಯಗಳನ್ನು ನನ್ನ ತಂದೆಯವರು ನನಗೆ ಹೇಳಿರುತ್ತಾರೆ. ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳನ್ನು ನನ್ನ ತಂದೆಯವರು ಹೇಳಿದ ಮಾಹಿತಿಯಂತೆ ನಾನು ಹೇಳಿರುತ್ತೇನೆ.

3. ಈ ದಾವೆಯಲ್ಲಿರುವ ಅ ಮತ್ತು ಬ ಪರಿಶಿಷ್ಟದ ಆಸ್ತಿಗಳು ಯಾವ ಯಾವುದು ಎಂದು ಗೊತ್ತು. ದಾವಾ ಅ ಪರಿಶಿಷ್ಟದ ಆಸ್ತಿಗಳ ಸರ್ವೆ ನಂ. 627/3 ರಲ್ಲಿ 30 ಗುಂಟೆ, 627/6 ರಲ್ಲಿ 8 ಗುಂಟೆ, 634/1 ರಲ್ಲಿ 1 ಎಕರೆ 11 ಗುಂಟೆ ಇರುತ್ತದೆ. ಬ ಪಶಿಷ್ಟದ ಆಸ್ತಿಯ ಸರ್ವೆ ನಂ. 634ಬ/4 ರಲ್ಲಿ 11 ಗುಂಟೆ ಆಗಿರುತ್ತದೆ. ನನಗೆ ದಾವಾ ಆಸ್ತಿಗಳ ಮಾಹಿತಿಯಾಗಲೀ, ವಾದಿ, ಪ್ರತಿವಾದಿಗಳ ಕುಟುಂಬದ ಬಗ್ಗೆಯಾಗಲೀ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೂ, ಗೋಯ್ದು @ ಗೋವಿಂದ ಲಚ್ಮಯ್ಯ ನಾಯ್ಕ ರವರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಹಾಗಾಗಿ ವಾದಿಗಳಿಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸ್ವಂತ ಅಕ್ಕ ಮತ್ತು ಮಕ್ಕಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ್, ಭಟ್ಕಳ.**